(*c*) whether the Government are aware that the Board of Visitrors of the Savalgi Dispensary has passed a resolution requesting the Government to construct a room for conducting post mortem examination of dead bodies that are brought to Savalgi PHC and that the resolution has been sent to D.H.O., Bijapur for further action ;

(*d*) whether the Government intend to construct rooms for doing post-mortem examination of dead bodies in the P.H.Cs. of Savalgi and Bableshwar ?

SRI N. HUTCHMASTI GOWDA (Minister for Revenue) (On belalf of Sri H. Siddaveerappa (Minister for Health).—

(*a*) Yes.

(*b*) No.

(*c*) Yes.

(*d*) Yes.—As early as possible keeping the availabilty of finances and the priority for undertaking construction of new buildings in view.

ಶ್ರೀ ಪಿ. ಎಂ. ಭಾಂಗಿ —ನನ್ನ ಬಿ ಪ್ರಶ್ನೆಗೆ ನಾಲೆಯ ದಂಡೆಯ ಮೇಲೆ ಶವ ಪರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ, ಅಲ್ಲಿನೆ ಕೊಟಡಿ ಸೌಕರ್ಯ ಇಲ್ಲ ಎಂದು ಹೇಳಿದ್ದಿರಿ, ಹಾಗಾದರೆ ಯಾವ ಸ್ಥಳದಲ್ಲಿ ಮಾಡುತ್ತೀರಿ?

† ಶ್ರೀ ಎಚ್. ಸಿದ್ದವೀರಪ್ಪ.—ಕಟ್ಟಡ ಇಲ್ಲ, ಒಂದು ಕಟ್ಟಡದ ಅವಶ್ಯಕತೆ ಇದೆ ಅದನ್ನು ಮಾಡುವುದಕ್ಕೆ ಪಿ.ಡಬ್ಲ್ಯೂ.ಡಿ. ನವರು ಅಂಧಾಜು ಆಗಬೇಕು ಎಂದು ಹೇಳುತ್ತಿದ್ದಾರೆ. ಅಲ್ಲಿ ೫೦೦ ರೂಪಾಯಿಯಿನ ಕರೀ ಹೆಂಚಿನ ಮನೆ ಆದರೆ ಸಾಕು.

ಶ್ರೀ ಪಿ. ಎಂ. ಭಾಂಗಿ —ಹಳ್ಳದ ದಂಡೆಯಲ್ಲಿ ಅನಾಗರೀಕತೆಯ ಸೌಕರ್ಯ ಇದೆ, ಒಂದು ತಾತ್ಕಾಲಿಕ ಷೆಡ್ ಆದರೂ ಕೂಡಲೇ ಹಾಕಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ತಾತ್ಕಾಲಿಕ ಷೆಡ್ ಹಾಕಿಯೇ ಕೆಲಸ ಮಾಡುತ್ತಿದ್ದಾರೆ, ಅದಕ್ಕಿಂತ ಕರೀ ಹೆಂಚಿನ ಮನೆ ಕಟ್ಟಿದರೆ ಉತ್ತಮ, ಅದನ್ನು ಮಾಡಿಸುತ್ತೇವೆ

Repairs to Yadgir-Gumitkal Road

838. SRI MALLIKARJUNA KHARGE (Gurmitkal) —Will the Minister for Public Works be pleased to state.—

(*a*) the total amount allotted to Yadgir P. W. D Division for road work;

(*b*) the amount earmarked for Yadgir-Gurmitkal Road for its re-carpetting or improvement

(*c*) when Government intend to improve the condition of Gurmitkal to Yadgir Road?

SRI S. B. NAGARAL (Minister of State for Minor Irrigation [on behalf of) SRI H. M. CHANNABASAPPA (Minister for Public Works] —

(*a*) Rs. 29.56 lakhs.

(*b*) Rs. 1,21,20) is earmarked out of Lumpsu n Grants.

(*c*) Improvements will be ma le to the extent grants are available

SRI M. MALLIKARJUNA KHARGE.—What is the amount kept f r Yadgir sub-division for various roads for re-concreting and rural communication roads?

† ಶ್ರೀ ಎಸ್. ಬಿ. ನಾಗರಾಳ.—ಈಗಾಗಲೇ ಅದಕ್ಕೆ ೨೯.೫೬ ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳತಕ್ಕದ್ದು ಗುರುಮಿಟಕಲ್ ಮತ್ತು ಯಾದಗಿರಿ ರಸ್ತೆಗೆ ಒಂದು ಲಕ್ಷ ೨೦ ಸಾವಿರ ರೂಪಾಯಿಗಳನ್ನು ನಿಗಧಿ ಮಾಡಲಾಗಿದೆ. ೧೯೭೬-೭೭ನೇ ಸಾಲಿಗೆ ೮೦-೮೧ ಸಾವಿರ ರೂಪಾಯಿ ಒದಗಿಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ.

SRI M. MALLIKARJUNA KHARGE.—Out of Rs. 29.56 lakas how much amount is kept for rural communication roads, how much amount for reconcreting and how much for improvement of roads?

ಶ್ರೀ ಎಸ್. ಬಿ. ನಾಗರಾಳ್.—ಸ್ಪೆಷಲಾಗಿ ೨೧.೧೫ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಐ.ಸಿ.ಆರ್.ಸಿ. ನಲ್ಲಿ ಎಷ್ಟೆಂದರೆ ಲಕ್ಷ ರೂಪಾಯೀಗಳನ್ನು ಅಲಾಟ್ ಮಾಡಿದ್ದಾರೆ.

ಮಳಿಗೆಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಅಂದಾಜುಗಳು

೬೮೫. ಶ್ರೀ ಎ. ನಂಜಪ್ಪ (ಅರಸೀಕೆರೆ).—ಸಹಕಾರ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಸಹಕಾರಿ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಲಾಗುವ ಮಳಿಗೆಗಳ ಅಂದಾಜು ಮೊತ್ತವೆಷ್ಟು, ಇಲಾಖೆಯ ಎಷ್ಟನೇ ವರ್ಷದ ಅಂದಾಜು ಬೆಲೆಗಳು.

(ಆ) ಈಗ ಕಟ್ಟಡಕ್ಕೆ ಬೇಕಾಗುವ ಎಲ್ಲಾ ಪದಾರ್ಥಗಳ ಮತ್ತು ಕೂಲಿ ಇತ್ಯಾದಿಗಳು ಬಹಳ ಜಾಸ್ತಿ ಆಗಿರುವುದರಿಂದ ಸದರಿ ಕಟ್ಟಡಗಳ ಕೆಲಸಕ್ಕೆ ಕಂಟ್ರಾಕ್ಟರುಗಳು ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಈ ಹಿಂದಿನ ಅಂದಾಜುಗಳನ್ನು ಪುನಃ ವಿಮರ್ಶಿಸಿ ಈಗಿನ ಪಿ.ಡಬ್ಲ್ಯೂ.ಡಿ ಅಂದಾಜಿನಂತೆ ಅಂದಾಜು ಮಾಡಿಸಿ ಸದರಿ ಅಂದಾಜು ದರಗಳನ್ನು ಜಾರಿಗೆ ಕೊಡುವ ಪದ್ಧತಿಯನ್ನು ಜಾರಿಗೆ ತರುವುದೇ?

ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಮಂತ್ರಿಗಳು).—

(ಅ) ಮಳಿಗೆಗಳನ್ನು ಕಟ್ಟಲು ಹಣದ ಸಹಾಯವನ್ನು ಒದಗಿಸಿದ ವರ್ಷಕ್ಕೆ ಸಂಬಂಧಪಟ್ಟ ಅಂದಾಜು ಬೆಲೆಗಳು

(ಆ) ಹೌದು.

(ಇ) ಪರಿಶೀಲಿಸಲಾಗುವುದು.

ಶ್ರೀ ಅನಿವಾಳದ ಸಂಜಪ್ಪ —ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಲೋಕೋಪಯೋಗಿ ಇಲಾಖಾ ಅಂದಾಜಿನಂತೆ ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ಕಳೆದ ೧೦-೧೨ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳ ಸೇವಾ ಸಹಕಾರ ಸಂಘಗಳ ಮಳಿಗೆಗಳನ್ನು ಮಂಜೂರು